ಯಂನ್ನು ಕೊಡುತ್ತಿದ್ದಾರೆಂದು ಅಲ್ಲಿಂದ ಬಂದಂಥ ಬೇರೆ ಜನಾಂಗದವರು ಹೇಳಿದರು. ಆದ್ದರಿಂದ ಅಲ್ಲಿನ ಮುಖ್ಯಮಂತ್ರಿಗಳು ಬರೀ ಹೇಳಿಕೆಯನ್ನು ಮಾತ್ರ ಕೊಡುತ್ತಾರೆಯೇ ಹೊರತು ಯಾವ ರಕ್ಷಣೆಯನ್ನೂ ಸಹ ಕನ್ನಡ ಜನರಿಗೆ ಕೊಡುತ್ತಿಲ್ಲ. ಆದ್ದರಿಂದ ನಮ್ಮ ಮಾನ್ಯ ಮುಖ್ಯಿ ಮಂತ್ರಿಗಳು ಈ ಸಮಸ್ಯೆಯಂನ್ನು ಬಗೆಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.— ಮಾನ್ಯ ಅಧ್ಯಕ್ಷರೇ ನಮ್ಮ ಸರ್ಕಾರವು ಗೋವಾ ಸರ್ಕಾರದ ಜೊತೆಯಲ್ಲಿ ಮಾತುಕತೆ ನಡೆಸಿದೆ ಅಲ್ಲಿರುವಂಥಾ ಎಲ್ಲಾ ಕನ್ನಡಿಗರಿಗೂ ಕೂಡ ರಕ್ಷಣೆ ಕೊಡಂತ್ತೆವೆ ಎನ್ನುವ ಭರವಸೆಯನ್ನು ಅಲ್ಲಿನ ಮುಖ್ಯಮಂತ್ರಿಗಳು ಬಹಿರಂಗವಾಗಿ ಹೇಳಿದ್ದಾರೆ. ಮತ್ತು ಈಗ ಯಾರು ಮನೆಗಳನ್ನು ಕಳೆದುಕೊಂಡಿದ್ದಾರೋ ಅಂತಹವರಿಗೆಲ್ಲಾ ಕೂಡ ಮನೆಗಳನ್ನು ಕಟ್ಟಿಸಿಕೊಡುತ್ತೇವೆ ಎನ್ನುವ ಮಾತನ್ನೂ ಸಹ ಹೇಳಿದ್ದಾರೆ ಮತ್ತು ಯಾರ್ಯಾರಿಗೆ ಯಾವ ರೀತಿಯಲ್ಲಿ ಸಹಾಯ ಮಾಡುವುದಕ್ಕೆ ಸಾಧ್ಯವಿದೆಯೋ ಆ ಎಲ್ಲಾ ಸಹಾಯಗಳನ್ನು ನಮ್ಮ ಸರ್ಕಾರ ಒದಗಿಸಿಕೊಡುತ್ತದೆ ಎನ್ನುವ ಮಾತನ್ನೂ ಕೂಡ ಅವರು ನನಗೆ ಹೇಳಿದ್ದಾರೆ. ಆದ್ದರಿಂದ ಗೋವಾ ಮುಖ್ಯಿ ಮಂತ್ರಿಗಳು ನಮ್ಮ ಕನ್ನಡಿಗರಿಗೆ ಎಲ್ಲಾ ರೀತಿಯಲ್ಲಿ ರಕ್ಷಣೆ ಕೊಡುತ್ತಾರೆ. ಇದರ ಬಗ್ಗೆ ಯಾರೂ ಆನುಮಾನ ಪಡಬೇಕಾಗಿಲ್ಲ. ಯಾರೋ ಬಂದು ಹೇಳಿದರು ಎಂದು ಮಾನ್ಯ ಸದಸ್ಯರು ಇಲ್ಲಿ ಹೇಳುವುದು ಬೇಡ. ಮತ್ತು ನಾವು ಇಲ್ಲಿ ಹೆಚ್ಚು ಗೊಂದಲ ಮಾಡಿಕೊಂಡರೆ ಅಲ್ಲಿರುವಂಥ ನಮ್ಮ ಕನ್ನಡ ಜನರಿಗೆ ತೊಂದರೆಯಾಗುತ್ತದೆ, ನಮ್ಮ ಕನ್ನಡ ಉದ್ದಿಮೆದಾರರಿಗೆ ತೊಂದರೆಯಾಗುತ್ತದೆ. ಅಲ್ಲದೆ ಯಾವ ಶಾಸಕರ ಸಮಿತಿಯೂ ಕೂಡ ಅಲ್ಲಿಗೆ ಹೋಗಿ ಅಲ್ಲಿನ ವಾತಾವರಣವನ್ನು ಪರಿಶೀಲನೆ ಮಾಡಿಕೊಂಡು ಬರುವುದು ಬೇಡ. ಮಂತ್ತು ಮೊನ್ನೆ ನಮ್ಮ ಭಾರತ ದೇಶದ ಪ್ರಧಾನ ಮಂತ್ರಿಗಳು ಗೋವಾಕ್ಕೆ ಹೋದಾಗ ಕೂಡ ಹೇಳಿದ್ದಾರೆ. ಏನೆಂದರೆ, ಯಾವ ಒಬ್ಬ ಪ್ರಜೆಯೇ ಆಗಲಿ ಅವರು ಎಲ್ಲಿಯಾದರೂ ಬಂದು ನೆಲಸಿ ಅವರು ಜೀವನ ಮಾಡಬಹುದು. ಅವರಿಗೆ ಒಂದು ತೊಂದರೆಯನ್ನೂ ಕೊಡಬಾರದೆಂದು ಹೇಳಿದ್ದಾರೆ. ಆದ್ದರಿಂದ ನಾವು ಈ ವಿಷಯವನ್ನು ಇಲ್ಲಿಗೆ ಪೊಟಕು ಮಾಡಿ ಸುಮ್ಮನೆ ಆಗುವುದು ಒಳ್ಳೆಯದು.

SRI QUAMRUL ISLAM.—Yesterday I raised the issue regarding declaring 28th December as the General Holiday for Idmilad. Now the Hon ble Chief Minister is here and I request him to kindly declare 28th December as General Holiday because we will celebrate Idmilad on that day. All these years, it was a General Holiday but this year, it is not declared as a General Holiday in the list of Holidays issued by the Government I would also like to know the reason for not including 28th December as a General Holiday in the list of Holidays and dropping the same all of a sudden. Will the Government consider my request and declare 28th December as a General Holiday for Idmilad.

ಶ್ರೀ ಸಿ.ಎಂ. ಇಬ್ರಾಂಹಿಂ.—ಮಾನ್ಯ ಅಧ್ಯಕ್ಷರೇ, ಆಲ್ ಇಂಡಿಯಾ ಲೆವೆಲ್‌ನಲ್ಲಿಯೂ ಕೂಡ ರಜಾ ಕೊಟ್ಟಿದ್ದಾರೆ. ಆದ್ದರಿಂದ ತಾವು ಇಲ್ಲಿ ಕೊಡುವುದು ಒಳ್ಳೆಯದು.

SRI R. GUNDU RAO.—I have no objection at all and if they have given, we will also give. Just now I received information that it has already been declared.

SRI QUAMRUL ISLAM.—Thank you very much Sir.

ವಿಷಯ : ಪಟೇಲ್‌ರಿಗೆ ಮಾಸಾಶನ ಕೊಡುವ ಬಗ್ಗೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಸ್ವಾಮಿ, ಮಾನ್ಯ ಮುಖ್ಯಿ ಮಂತ್ರಿಗಳು ಈ ಸಭೆಯಲ್ಲಿ ಇದ್ದಾರೆ. ಆದ್ದರಿಂದ ಒಂದು ವಿಚಾರವನ್ನು ಹೇಳುತ್ತೇನೆ. ಏನೆಂದರೆ, ತೋಟಿ, ತಳವಾರರಿಗೆ. ಮತ್ತು ಶಾನುಭೋಗರಿಗೆ ಮಾಸಾಶನವನ್ನು ಕೊಡುತ್ತಿದ್ದಾರೆ. ಆದರೆ ಈ ಪಟೇಲರಿಗೆ ಮಾತ್ರ ಮಾಸಾಶನ

ಕೊಡುತ್ತಿಲ್ಲವಾದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಮನಸ್ಸು ಮಾಡಿ ಪಟೇಲರಿಗೂ ಕೂಡ ಮಾಶಾಸನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಸ್ವಾಮಿ, ನಮ್ಮ ತಂದೆಯವರೂ ಕೂಡ ಪಟೇಲರಾ.

ಶ್ರೀ ಸಿ. ಎಂ. ಇಬ್ರಾಹಿಂ.—ಸ್ವಾಮಿ, ಈ ಪಟೇಲರಿಗೆ ಮಾಸಾಶನ ಕೊಡುವುದು ಒಳ್ಳೆಯದು. ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಒಂದು ಸಾರಿ ಇದನ್ನು ಪರಿಶೀಲನೆ ಮಾಡೋಣ ಎಂದು ಹೇಳಿದ್ದರು.

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಇಷ್ಟು ಕಳಕಳಿಯಿಂದ ಒತ್ತಾಯ ಮಾಡುತ್ತಿರುವುದರಿಂದ, ತೋಟಿ, ತಳವಾರರಿಗೆ ಹಾಗೂ ಶಾನುಭೋಗರಿಗೆ ಯಾವ ರೀತಿಯಲ್ಲಿ ಮಾಸಾಶನ ಕೊಡುತ್ತಿದ್ದೇವೆಯೋ ಅದೇ ರೀತಿಯಲ್ಲಿ ಈ ಪಟೇಲರಿಗೂ ಕೊಡುವ ವ್ಯವಸ್ಥೆಯನ್ನು ಮಾಡೋಣ. ಇದು ಕಡೇ ಅಧಿವೇಶನವಾಗಿರುವಾಗ, ಇಷ್ಟು ಮಂದಿ ಸದಸ್ಯರು ಹೇಳಿದಮೇಲೆ, ಅವರಿಗೂ ಕೂಡ ಪೆನ್‌ಷನ್ ಕೊಡೋಣ.

ಶ್ರೀ ಸಿ. ಎಂ. ಇಬ್ರಾಹಿಂ.—ನಾನು ಪಟೇಲರುಗಳಿಲ್ಲರ ಪರವಾಗಿ ಮಾನ್ಯ ಮುಖ್ಯಮಂತ್ರಿಯವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಶ್ರೀ ಆರ್. ಗುಂಡೂರಾವ್.—ಶಾನುಭೋಗರಿಂಗಳಿಗೆ, ತೋಟಿ ತಳವಾರುಗಳಿಗೆ ಪೆನ್‌ಷನ್ ಕೊಡುತ್ತೇವೆ. ಪಟೇಲರುಗಳು ಅನೇಕ ವರ್ಷಗಳಿಂದ ಸೇವೆ ಮಾಡಿದ್ದಾರೆ. ತಮ್ಮನ್ನು ಮಾತ್ರ ಬಿಟ್ಟಿದ್ದಾರೆನ್ನುವ ನಿರಾಶೆ ಅವರ ಮನಸ್ಸಿಗೆ ಬರುವುದು ಬೇಡ. ಅವರಿಗೂ ಕೂಡ ಇತರರಿಗೆ ಕೊಡುವಂತೆ ಮಾಸಾಶನವನ್ನು ಕೊಡುವುದಕ್ಕೆ ಸರ್ಕಾರ ಒಪ್ಪುತ್ತದೆ.

ಶ್ರೀ ಕೆ. ಭಾಸ್ಕರ ನಾಯಡು.—ಶ್ರೀಮಾನ್ ಶ್ರೀಕಂಠಯ್ಯನವರ ತಂದೆಯವರೂ ಕೂಡ ಪಟೇಲರಾಗಿದ್ದರು ಸ್ವಾಮಿ, ಅವರಿಗೂ ಕೂಡ ಪೆನ್‌ಷನ್ ಕೊಡಬೇಕೆಂದು ಕೇಳುತ್ತೇನೆ.

ಅಧ್ಯಕ್ಷರ ಹೇಳಿಕೆ

ವಿಷಯ : ವಿಧಾನಸಭೆಗೆ ಚುನಾವಣೆ ನಡೆಸುವ ಬಗ್ಗೆ.

ಅಧ್ಯಕ್ಷರು.—ಮಾನ್ಯ ಸಭಾನಾಯಕರೇ, ಮಾನ್ಯ ವಿರೋಧ ಪಕ್ಷದ ನಾಯಕರೆ, ಸನ್ಮಾನ್ಯ ಸದಸ್ಯರೆ ಈ ದಿವಸ ಈ ಅಧಿವೇಶನದ ಕೊನೆ ದಿವಸ. ಈ ಅಧಿವೇಶನ ಆದಮೇಲೆ ಬಹಳಮಟ್ಟಿಗೆ ಮುಂದಿನ ಚುನಾವಣೆಯಾದ ಮೇಲೆ ಪುನಃ ಸೇರುವವರಿದ್ದೇವೆ. ಈ ಐದು ವರ್ಷಗಳ ಅವಧಿಯಲ್ಲಿ ನಾವು ಸಾರ್ವಜನಿಕರ ಹಿತದೃಷ್ಟಿಯಿಂದ ಈ ಮನೆಯಲ್ಲಿ ಕೆಲಸಕಾರ್ಯಗಳನ್ನು ಮಾಡಿದ್ದೇವೆ. ಕೆಲಸ ಕಾರ್ಯಗಳನ್ನು ಮಾಡುವಾಗ ಒಂದೊಂದು ಸಾರೆ ನಮ್ಮ ಮನಸ್ಸಿನ ವಿಕಾರಗಳ ಫಲವಾಗಿ ಇನ್ನೇನಾದರೂ ಪ್ರಸ್ತಾಪ ಮಾಡಿರಬಹುದು. ಅದನ್ನು ಯಾರೂ ಮನಸ್ಸಿನಲ್ಲಿಟ್ಟುಕೊಳ್ಳಬಾರದೆಂದು ನಾನು ಮಾನ್ಯ ಸದಸ್ಯರಲ್ಲಿ ವಿನಂತಿಮಾಡಿ ಕೊಳ್ಳುತ್ತೇನೆ. ವೈಯಕ್ತಿಕವಾಗಿ ನಾನು ಏನಾದರೂ ಈ ಸಭೆಯ ಅಧ್ಯಕ್ಷನಾಗಿ ಕೆಲಸ ಮಾಡುವಾಗ ಸದಸ್ಯರಿಗೆ ಯಾರಿಗಾದರೂ ಕೂಡ ಒಂದು ಮಾತು ಮೀರಿ ಮಾತನಾಡಿದ್ದರೆ ಯಾರೂ ಅನ್ಯಥಾ ಭಾವಿಸಬಾರದೆಂ. ಹಾಗೆ ಮಾತನಾಡಿದ್ದರೂ ಸಭೆಯ ಕಾರ್ಯಕಲಾಪಗಳ ದೃಷ್ಟಿಯಿಂದ ಮಾತನಾಡಿದ್ದೇನೆಂದು ನಾನು ಅಂದುಕೊಂಡಿದ್ದೇನೆ. ಹಾಗೆಂದು ಭಾವಿಸಿಕೊಂಡು, ಒಂದು ವೇಳೆ ಯಾರ ಮನಸ್ಸಿಗಾದರೂ ನೋವಾಗಿದ್ದರೆ ಕ್ಷಮಿಸಬೇಕೆಂದು ಈ ಸಭೆಯಲ್ಲಿ ತಮ್ಮನ್ನು ಕೇಳಿಕೊಳ್ಳುತ್ತಾ, ಎಲ್ಲರೂ ಪುನಃ ಚುನಾವಣೆಗೆ ಹೋಗುವವರಿದ್ದೀರಿ. ಚುನಾವಣೆಯಲ್ಲಿ ಸ್ಪರ್ಧೆ ಮಾಡತಕ್ಕಂಥ ಎಲ್ಲರಿಗೂ ಕೂಡ ಜಯ ದೊರೆತು, ಅವರು ಜಯಶೀಲರಾಗಿ ಮತ್ತೆ ಬಂದು ಈ ಕನ್ನಡ ರಾಜ್ಯದ ಉದ್ಧಾರ ಮಾಡುವಂತಾಗಬೇಕು. ಈ ರಾಜ್ಯವನ್ನು ವ್ಯವಸ್ಥಿತವಾಗಿ ಕಟ್ಟಿ ಬೆಳೆಸಿ ಇಡೀ ರಾಷ್ಟ್ರದಲ್ಲೇ ಉತ್ತಮವಾದಂತಹ ರಾಜ್ಯವೆನ್ನುವ ಹೆಸರನ್ನು ಹರಡಂಥ ಶಕ್ತ ರಾಜಕಾರಣಿಗಳಾಗಿರಿ ಎಂದು ತಮಗೆಲ್ಲರಿಗೂ ಮತ್ತೊಮ್ಮೆ ಶುಭಕೋರುತ್ತೇನೆ. ಆದರಲ್ಲೂ ವಿರೋಧ ಪಕ್ಷದವರು ಯಾವಾಗಲೂ ಕೂಡ ಅಧ್ಯಕ್ಷರ ಹೆಚ್ಚಿನ ಮನ್ನಣೆಗೆ ಅರ್ಹರಾಗಿರುತ್ತಾರೆ. ಕಾರಣ ಇಷ್ಟೆ ಬಹುಮತದಿಂದ ಸಭೆ ತನ್ನ ಕಾರ್ಯಕಲಾಪಗಳನ್ನು ಮಾಡುವಾಗ ಅಲ್ಪಸಂಖ್ಯಾತರಾದ ವಿರೋಧ ಪಕ್ಷದವರು ತಮ್ಮ ಅಭಿಪ್ರಾಯಗಳನ್ನು ನೇರವಾಗಿ, ಸ್ಪಷ್ಟವಾಗಿ ಹೇಳುವುದಕ್ಕೆ ಅನುಕೂಲವಾದಂಥ ವಾತಾವರಣವನ್ನು ನಿರ್ಮಿಸಿ ಅದರ ರಕ್ಷಣೆ ಮಾಡತಕ್ಕಂಥ ಗೌರವ ಮತ್ತು ಹೊಣೆ ಕೂಡ ಅವರದ್ದೇ